15-4-98ರ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ.6,400-00 ಅಥವಾ ಅದಕ್ಕಿಂತಲೂ ಕಡಿಮೆ ಉಳ್ಳ, ಪಟ್ಟಣ ಪ್ರದೇಶದಲ್ಲಿ ಕುಟುಂಬದ ವಾರ್ಷಿಕ ಆದಾಯ ರೂ. 11850-00 ಅಥವಾ ಅದಕ್ಕೂ ಕಡಿಮೆ ಉಳ್ಳವರು ಹಸಿರು ಪಡಿತರ ಚೀಟಿ ಪಡೆಯಲು ಅರ್ಹರಾಗಿರುತ್ತಾರೆ. ಕೆಳಕಂಡ ವರ್ಗಗಳ ಕುಟುಂಬಗಳು ಒಳಪಟ್ಟಿರುತ್ತವೆ.

1) ಭೂ ರಹಿತ ಕೃಷಿ ಕಾರ್ಮಿಕರು.

2) ವಿಲೇಜ್ ಆರ್ಟಿಸನ್ಸ್

3) ಸಣ್ಣ ಹಿಡುವಳಿ ರೈತಾಪಿಗಳು

4) ಅತಿ ಸಣ್ಣ ರೈತರು

5) ಸರ್ಕಾರದಿಂದ ಪಿಂಚಣಿ ಪಡೆಯುವ ವರ್ಗದವರು.

ಅ) ವೃದ್ಧಾಪ್ಯ ಪಿಂಚಣಿದಾರರು

ಆ) ಅಂಗವಿಕಲ ಪಿಂಚಣಿದಾರರು

ಇ) ವಿಧವಾ ಪಿಂಚಣಿದಾರರು

6) ಇತರೆ ಗ್ರಾಮಾಂತ ಸಾಂಪ್ರದಾಯಿಕ ಕಸುಬುದಾರ ಕಾರ್ಮಿಕರು.

ಅ) ಕಲ್ಲು ಕುಟಿಕರು

ಆ) ತೋಟ ಕೆಲಸಗಾರರು

ಇ) ಊದುಬತ್ತಿ ಹೊಸೆಯುವವರು

ಈ) ಬೀಡಿ ಕಾರ್ಮಿಕರು.

7) ಘೋಷಿತ ಮತ್ತು ಅಘೋಷಿತ ಕೊಳಚೆ ಪ್ರದೇಶದ ನಿವಾಸಿಗಳು.

ಇ) ಖಂಡಿತ.

ವಿಷಯ: ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾಮಗಾರಿಗಳು.

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97 ಹಾಗೂ 97-98ರ ಅವಧಿಯಲ್ಲಿ ಗುಳೇದಗುಡ್ಡ ಮತಕ್ಷೇತ್ರಕ್ಕೆ ಶೇ.60 ಹಾಗೂ ಶೇ.40ರ ಅನುದಾನದಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಂಡಿದೆ?

ಆ) ಸದರಿ ಕಾಮಗಾರಿಗಳು ಯಾವ ಹಂತದಲ್ಲಿವೆ?

ಇ) ಕಾಮಗಾರಿಗಳನ್ನು ತಡವಾಗಿ ಕೈಗತ್ತಿಕೊಳ್ಳಲು ಕಾರಣವೇನು?

ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು):

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ 1995-96 ಹಾಗೂ 96-97ನೇ ಸಾಲಿನಲ್ಲಿ ಗುಳೇದಗುಡ್ಡ ವಿಧಾನ ಸಭಾ ಕ್ಷೇತ್ರಕ್ಕೆ 7.50 ಲಕ್ಷ ರೂಗಳು ನಿಗಧಿಪಡಿಸಲಾಗಿದೆ ಇದನ್ನು 1996-97ನೇ ಸಾಲಿನ ಅನುದಾನವೆಂದು ಪರಿಗಣಿಸಿ ಈ ಕೆಳಕಂಡ ಕಾಮಗಾರಿಗಳನ್ನು 1997-98ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	95-96 ಹಾಗೂ 96-97ನೇ ಸಾಲಿಗೆ ಸಂಬಂಧಿಸಿದಂತೆ 97-98ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿದ ಕಾಮಗಾರಿಗಳ ಮೊತ್ತ.	ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಷರಾ
1	2	3	4	5	6
ಶೇ 60ರ ಕಾರ್ಯಕ್ರಮ					
1.	ರಕ್ಕಸಿ ಹಳ್ಳಕ್ಕೆ ಪಿಟ್ಚಿಂಗ್ ಮಾಡುವುದು	0.80	-	ದಿ. 6.4.98 ರಂದು ಅಂದಾಜು ಪಟ್ಟಿ ಬಂದಿರುತ್ತದೆ.	

2.	ಶಿರೂರು ತಾಂಡ ಹತ್ತಿರ ಕೆರೆ ರಿಪೇರಿ	0.50	-	-	ಅಂದಾಜು ಪಟ್ಟಿ ಬಂದಿರುವುದಿಲ್ಲ.
ಶೇ. 40ರ ಕಾರ್ಯಕ್ರಮ					
3.	ಸುರಳೀಕೆರೆ ಕೂಡು ರಸ್ತೆ ನಿರ್ಮಾಣ	0.60	-	-	- ಸದರ -
4.	ಗುಳೇಗುಡ್ಡ ಪಾರಗಟ್ಟಿ ರಸ್ತೆ 3ರಲ್ಲಿ ಸಿ. ಡಿ. ನಿರ್ಮಾಣ	1.20	1.20	1.20	
5.	ಲಿಂಗಪುರದಿಂದ ಶಿರೂರು ತಾಂಡ ರಸ್ತೆ ನಿರ್ಮಾಣ	1.75	1.75	-	
	ಒಟ್ಟು		2.95	1.20	

ಮೇಲಿನ ಕಾಮಗಾರಿಗಳಲ್ಲಿ ಶೇ.40ರಡಿಯಲ್ಲಿ ಕ್ರ.ಸಂ (4) ಮತ್ತು (5)ನೇ ಕಾಮಗಾರಿಗಳಿಗೆ ಒಟ್ಟು 2.95 ಲಕ್ಷ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ 1.20 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಕಾಮಗಾರಿಯ ಪ್ರಗತಿಯ ಹಾಗೂ ಹಣದ ಬೇಡಿಕೆಯ ಪತ್ರ ಬಂದ ನಂತರ ಬಾಕಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಶೇ.60ರಡಿಯಲ್ಲಿ ಮತ್ತು ಶೇ.40ರಡಿಯಲ್ಲಿ ಅನುಕ್ರಮವಾಗಿ ಕ್ರ.ಸಂ (2) ಮತ್ತು (3) ಕಾಮಗಾರಿಗಳಿಗೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳಿಂದ ಯೋಜನೆ ಮತ್ತು ಅಂದಾಜು ಪತ್ರಿಕೆಗಳು ಬಂದಿರುವುದಿಲ್ಲ. ಅಂದಾಜು ಪತ್ರಿಕೆಗಳು ಬಂದ ನಂತರ ಬಾಕಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

1997-98ನೇ ಸಾಲಿನಲ್ಲಿ ಸದರಿ ಕ್ಷೇತ್ರಕ್ಕೆ 6.50 ಲಕ್ಷ ರೂ.ಗಳನ್ನು ಮಂಡಳಿಯ ವತಿಯಿಂದ ನಿಗದಿಪಡಿಸಿದ್ದು ಶೇ 60 ಮತ್ತು 40ರ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಷರಾ
ಶೇ.60ರ ಕಾರ್ಯಕ್ರಮ				
1)	ಬೈರಮಟ್ಟಿಕೆರೆ ಅಭಿವೃದ್ಧಿ ಹಾಗೂ ದುರಸ್ತಿ	1.00	1.00	
2)	ಲಾಯಗುಂಡ ಕೆರೆ ದುರಸ್ತಿ ಹಾಗೂ ಹೂಳು ತೆಗೆಯುವುದು	2.00	-	
ಶೇ.40ರ ಕಾರ್ಯಕ್ರಮ				
1)	ಬೈರಮಟ್ಟಿ ಇಂದ ವೆಂಕಟೇಶ್ವರ ದೇವಸ್ಥಾನದವರೆಗೆ ರಸ್ತೆಗೆ ಗರಡು ಹೂಡಿಕೆ ಹಾಗೂ ಖಡೀ ಲೆವೆಲ್ ಕಿಮೀ 2.00 ಕಿಮೀ.	2.00	2.00	
	ಒಟ್ಟು	5.00	3.00	

ಉಳಿದ 1.50 ಲಕ್ಷ ರೂ.ಗಳಿಗೆ ಸಂಬಂಧಿಸಿದಂತೆ ಲಿಂಗಾಪುರ ಹಾಗೂ ಕೊಟ್ನಹಳ್ಳಿ ಗ್ರಾಮದಲ್ಲಿ ನಾಲಾಬದು: ಚೆಕ್‌ಡ್ಯಾಂ ಕಾಮಗಾರಿಗಳಿಗೆ ಯೋಜನೆ ಮತ್ತು ಅಂದಾಜು ಪಟ್ಟಿಯು ಇತ್ತೀಚಿಗೆ ಬಂದಿದ್ದು, ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಸದರಿ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ.

ಇ) ಕೆಲವು ಕಾಮಗಾರಿಗಳಿಗೆ ಯೋಜನೆ ಮತ್ತು ಅಂದಾಜು ಪತ್ರಿಕೆಗಳು ಸಕಾಲದಲ್ಲಿ ಸಲ್ಲಿಸದಿರುವುದರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತಡವಾಗಿರುತ್ತದೆ.

ವಿಷಯ: ರಾಜ್ಯದಲ್ಲಿರುವ ಕಾರಾಗೃಹಗಳು.

901 (1232)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಕಾರಾಗೃಹ ಗೃಹರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು